ಆಜ್ಞೆಯ ಬಗ್ಗೆ ನಾನೇನು ಹೇಳುತ್ತಿದ್ದೇನೆಂದರೆ, ಶಾಂತಿ ಸಮಿತಿ ಸಭೆಯನ್ನು ಕರೆದು ಒಬ್ಬ, ಅಲ್ಲಿಯ ಪ್ರಮುಖರ, ಜಿಲ್ಲಾಮಂತ್ರಿಗಳ ಒಂದು ಚಿತಾವಣೆಯಿಂದ, ಬಿ.ಜೆ.ಪಿ.ಯ ಕಾರ್ಯಕರ್ತರನ್ನು, ಚುನಾಯಿತ ಪ್ರತಿನಿಧಿಗಳನ್ನು ಹತ್ತಿಕ್ಕುವಂಥ ಕಾನೂನುಬಾಹಿರ ಕ್ರಮವನ್ನು ಆ ಅಸಿಸ್ಟೆಂಟ್ ಕಮೀಷನರ್‌ರವರಿಂದ ಈ ಜನತಾದಳ ಸರ್ಕಾರ ಮಾಡಿದೆ; ಇದು ಮುಂದುವರಿಯುತ್ತದೆ. ಸರ್ವಾಧಿಕಾರಿಯಿಂದ ಕೆಲಸವನ್ನು ಮಾಡುತ್ತಿದ್ದಾರೆ. ಹಚ್ಚು ಸಮಯವನ್ನು ತೆಗೆದುಕೊಳ್ಳುವುದಿಲ್ಲ. ನಾವೇನು ದಂಧೆ ಮಾಡುವುದಕ್ಕೆ ಸಿದ್ಧವಿಲ್ಲ. ನನ್ನ ಉದ್ದೇಶ ಕರ್ನಾಟಕ ರಾಜ್ಯದ ಜನ ಅಲ್ಲಿದ್ದಾರೆ; ನಮ್ಮ ಮಾಲೀಕರು ಅಲ್ಲಿದ್ದಾರೆ. ಯಾವ ರೀತಿ ಅಧಿಕಾರದ ಮದದಿಂದ, ಸರ್ವಾಧಿಕಾರಿಗಳಂತೆ, ಅಧಿಕಾರವನ್ನು ದುರುಪಯೋಗ ಮಾಡಿಕೊಂಡು, ಪ್ರತಿಪಕ್ಷಗಳನ್ನು ಹತ್ತಿಕ್ಕುವಂಥ ಹೇಯ ಕೃತ್ಯ, ಒಬ್ಬ ಜಿಲ್ಲಾಮಂತ್ರಿ, ಒಬ್ಬ ಮಂತ್ರಿಗಳು, ಅಸಿಸ್ಟೆಂಟ್ ಕಮೀಷನರನ್ನು, ಜಿಲ್ಲಾಧಿಕಾರಿಗಳನ್ನು, ಪೋಲೀಸರನ್ನು ದುರುಪಯೋಗ ಮಾಡಿಕೊಳ್ಳುವಂಥ ಅನೇಕ ಘಟನೆಗಳು ನಡೆಯುತ್ತಾ ಇದೆ. ನೀವು ಇದೇ ರೀತಿ ಮುಂದುವರಿಯುವುದಾದರೆ, ಇದೇ ರೀತಿ ಆಡಳಿತ ನಡೆಸುತ್ತೇವೆನ್ನುವುದಾರೆ, ರಾಜ್ಯದ ಜನ ಅದರ ಬಗ್ಗೆ ತೀರ್ಮಾನ ಮಾಡುತ್ತಾರೆ. ಎಲ್ಲಿ ಅಪೀಲು ಮಾಡಬೇಕು, ಎಲ್ಲಿ ನ್ಯಾಯ ತೆಗೆದುಕೊಳ್ಳಬೇಕು ಎನ್ನುವುದು ನಮಗೆ ಗೊತ್ತಿದೆ. ಆದರೆ ಯಾವ ಕಾರಣಕ್ಕೂ ಸಹ ಈ ರೀತಿ ಶಾಸಕರ ಮೇಲೆ , ಬಿ.ಜೆ.ಪಿ. ಕಾರ್ಯಕರ್ತರ ಮೇಲೆ ಕೇಸುಗಳನ್ನು ಹಾಕಿ, ಹತ್ತಿಕ್ಕಬಹುದು ಎಂಬ ಭ್ರಮೆ ನಿಮಗಿದ್ದರೆ, ಅದು ಸಾಧ್ಯವಿಲ್ಲ. ನಿಮ್ಮ ಸರ್ವನಾಶ ಹತ್ತಿರ ಬರುತ್ತಾ ಇದೆ, ಇದನ್ನು ಪ್ರತಿಭಟನೆ ಮಾಡಿ, ನಾವು ಸಭಾತ್ಯಾಗ ಮಾಡುತ್ತೇವೆ. ನಿಮ್ಮ ಒಂದು ನಡವಳಿಕೆ, ನಿಮ್ಮ ಆಡಳಿತ ವೈಖರಿ, ನಾಚಿಕೆಯಿಂದ ತಲೆತಗ್ಗಿಸುವಂಥ ಕೆಲಸ ಮಾಡುತ್ತಾ ಇದ್ದೀರಿ. ಜಿಲ್ಲಾಧಿಕಾರಿಗಳನ್ನು, ತಹಶೀಲ್ದಾರರನ್ನು ದುರುಪಯೋಗ ಮಾಡಿಕೊಂಡು, ಕೈಗೊಂಬೆಗಳನ್ನಾಗಿ ಮಾಡಿಕೊಂಡು...

(ಗೊಂದಲ)

ಶ್ರೀ ಎಂ. ಸಿ. ನಾಣಯ್ಯ : ನೀವು ಮಾತನಾಡಿದ್ದನ್ನು ಕೇಳಿದ್ದೇವೆ, ಹಾಗೆಯೇ ನಾವು ಮಾತನಾಡುವುದನ್ನೂ ನೀವು ಕೇಳಬೇಕಾಗುತ್ತದೆ.

(ಗೊಂದಲ)

(ಬಿ.ಜೆ.ಪಿ. ಸದಸ್ಯರು, ಧಿಕ್ಕಾರ ಕೂಗಿಕೊಂಡು, ಸಭಾತ್ಯಾಗ ಮಾಡಿದರು.)

ಶ್ರೀ ಎಂ. ಸಿ. ನಾಣಯ್ಯ : ನೀವು ಧಿಕ್ಕಾರ ಹಾಕಿ, ಈ ಸಭೆಯ ಘನತೆ ಗೌರವವನ್ನು ನಾಶ ಮಾಡಿ ಹೋಗುತ್ತಿದ್ದೀರಿ.

(ಗೊಂದಲ)

ಶ್ರೀ ಎಂ. ಸಿ. ನಾಣಯ್ಯ : ಮಾನ್ಯ ಸಭಾಧ್ಯಕ್ಷರೇ, ನಾನು ಒಂದನ್ನು ತಮ್ಮಲ್ಲಿ ವಿನಯಪೂರ್ವಕವಾಗಿ ಕೇಳಿಕೊಳ್ಳುತ್ತಿದ್ದೇನೆ. ಮಾನ್ಯ ವಿರೋಧಪಕ್ಷದ ನಾಯಕರಾದ ಶ್ರೀಮಾನ ಯಡಿಯೂರಪ್ಪನವರು, ಯಾವುದೋ ಕಾನೂನಿಗೆ ಒಳಪಟ್ಟಿರತಕ್ಕಂಥ, ನ್ಯಾಯಾಲಯಕ್ಕೆ ಸಂಬಂಧಪಟ್ಟಿರತಕ್ಕ ಆದೇಶವನ್ನು